ಕಾಲ ಬದಲಾಗಿದೆ. ತುಟಿ ರಂಗೇರಿಸಿಕೊಳ್ಳಲು ತರಹೇವಾರಿ ಬಣ್ಣದ ಲಿಪ್‌ಸ್ಟಿಕ್‌ಗಳಿದ್ದರೂ ಕೂಡ, ಅಂದು ಇದ್ದ ಆ ಮೋಹ ಈಗ ಇಲ್ಲವಾಗಿದೆ. ಅವುಗಳು ನನ್ನನ್ನು ಅಣಕಿಸುತ್ತಿವೆಯೇನೋ ಎಂದು ಒಮ್ಮೊಮ್ಮೆ ಅನಿಸುವುದುಂಟು.

■ ಧಾರಿಣಿ ಶ್ರೀನಿವಾಸ್

# ಮರೆಯಲಿ ಹ್ಯಾಂಗ.. ಈ ಲಿಪ್‌ಸ್ಟಿಕ್ ಪ್ರಸಂಗ!



ನನ್ನ ತಂದೆ ತುಂಬಾ ಸ್ಟ್ರಿಕ್ಟ್ ಮನುಷ್ಯ. ಅವರಿಗೆ ನಾನು, ನನ್ನಕ್ಕ ತಲೆಯಲ್ಲಿ ಎರಡು ಜಡೆ ಹಾಕಿರುವುದನ್ನು ನೋಡಿದರೆ ಏನೋ ಸಮಾಧಾನ. ನಾವು ಪ್ಯಾಂಟ್ ಹಾಕುವಂತಿರಲಿಲ್ಲ, ಕೂದಲು ಕತ್ತರಿಸಿಕೊಳ್ಳುವ ಹಾಗಿರಲಿಲ್ಲ, ಮುಖಕ್ಕೆ ಬಣ್ಣ ಹಚ್ಚುವ ಹಾಗಿರಲಿಲ್ಲ. (ನಮಗೆ ಬಣ್ಣ ಕೊಡಿಸುವವರು ಇದ್ದರೆ ತಾನೇ..!) ನಾವು ನಮ್ಮ ಓರಗೆಯವರ ಹಾಗೆ ಡ್ರೆಸ್ ಮಾಡಿಕೊಳ್ಳಬೇಕೆಂದು ಕಾಣುತ್ತಿದ್ದ ಕನಸು, ಎದೆಯಾಳದಲ್ಲೇ ಬಚ್ಚಿಟ್ಟುಕೊಂಡಿದ್ದ ಹತ್ತಾರು ಆಸೆಗಳು ನಮ್ಮೊಳಗೇ ಕರಗಿ ಹೋಗುತ್ತಿದ್ದವು. ನಮ್ಮ ಆಸೆ, ಕನಸುಗಳೆಲ್ಲ ನಮ್ಮ ತಂದೆಯವರ ಶಬ್ದಕೋಶದಲ್ಲಿ ನಿಷಿದ್ಧವಾಗಿತ್ತು.

ನಾನಾಗ ಬಹುಶಃ ನಾಲ್ಕನೇ ತರಗತಿಯಲ್ಲಿ ಓದುತ್ತಿದ್ದೆ. ನಮ್ಮನೆಗೆ ಒಬ್ಬರು ಆಂಟಿ ಬರುತ್ತಿದ್ದರು.ಬಹಳ ಚೆನ್ನಾಗಿ ಡ್ರೆಸ್ ಮಾಡಿಕೊಳ್ಳುತ್ತಿದ್ದರು. ನಾನವರಿಗೆ 'ಸ್ಟೈಲ್ ಆಂಟಿ' ಅಂತ ಕರೆಯುತ್ತಿದ್ದೆ. ಅವರು ಹಾಕುತ್ತಿದ್ದ ಲಿಪ್‌ಸ್ಟಿಕ್ ನನ್ನನ್ನು ಗಾಢವಾಗಿ ಸೆಳೆಯುತ್ತಿತ್ತು. ಅವರಿಗೆ ನನ್ನ ಆಸೆ ಗೊತ್ತಾಯಿತು. ಊರಿಗೆ ಹೋಗುವ ಮುನ್ನ, ಅವರಲ್ಲಿದ್ದ ಅರ್ಧ ಸವೆದ ಲಿಪ್‌ಸ್ಟಿಕ್ ಅನ್ನು ನನಗೆ ಕೊಟ್ಟರು. ನನಗಾಗ ಆಕಾಶ ಮೂರೇ ಗೇಣು. ನಾನು ಅದನ್ನು ಕದ್ದುಮುಚ್ಚಿ ತುಟಿಗೆ ಬಳಿದುಕೊಂಡು ತೃಪ್ತಿಯಾಗುವವರೆಗೆ ಕನ್ನಡಿಯಲ್ಲಿ ನೋಡಿಕೊಂಡ ಮೇಲೆ ಜೋಪಾನವಾಗಿ ಅದನ್ನು ಬಚ್ಚಿಡುತ್ತಿದ್ದೆ. ನಾವು ಅಕ್ಕ ತಂಗಿ ಜಗಳವಾದಾಗ ನನ್ನಕ್ಕ ನನ್ನ ಬಳಿ ಲಿಪ್‌ಸ್ಟಿಕ್ ಇರುವ ವಿಷಯವನ್ನು ನನ್ನ ತಂದೆಯ ಕಿವಿಗೆ ಹಾಕಿದಳು. ಇನ್ನು ಕೇಳಬೇಕಾ...ಮನೆಯಲ್ಲಿ ನನ್ನ ತಂದೆಯ ರುದ್ರತಾಂಡವ ಶುರು. ಕೈಯಲ್ಲಿದ್ದ ಆ ಲಿಪ್‌ಸ್ಟಿಕ್ ತುಂಡನ್ನು ಕಸಿದುಕೊಳ್ಳಲು ನನ್ನನ್ನು ಮನೆಯೆಲ್ಲಾ ಅಟ್ಟಾಡಿಸಿದರು. ಕೊನೆಗೂ ನನ್ನ ಕೈಯಿಂದ ಕಿತ್ತು ಬಚ್ಚಲು ಮನೆಯ ಅಟ್ಟಕ್ಕೆ ಎಸೆದರು.

ನನ್ನ ಕಂಗಳು ತೇವವಾದವು. ನನ್ನ ಆಸೆ ಎದೆಯಲ್ಲೇ ಬತ್ತಿಹೋಯಿತು. ನನ್ನ ತುಟಿಗಳನ್ನು ರಂಗೇರಿಸಿಕೊಂಡು ಮೆರೆವ ಕನಸು ನುಚ್ಚುನೂರಾಗಿತ್ತು. ಆದರೂ ಏನೋ ಒಂದು ಆಶಾಭಾವನೆ. ಅಪ್ಪ ಮೊಂಡಾದರೆ, ನಾನು ಜಗಮೊಂಡು.

ಮಾರನೆಯ ದಿನ ಅವರು ಕೆಲಸಕ್ಕೆ ಹೋದಾಗ, ಬಚ್ಚಲು ಮನೆಯ ಅಟ್ಟಕ್ಕೆ ಏಣಿ ಹಾಕಿ ಏರಿದೆ. ಅಲ್ಲಿ ಹಂಡೆ ನೀರು ಕಾಯಿಸಲು ಕೂಡಿಟ್ಟಿದ್ದ ತೆಂಗಿನ ಚಿಪ್ಪಿನ ರಾಶಿ ಹಾಗೂ ರದ್ದಿ ಕಾಗದಗಳು ಇದ್ದವು. ಇವುಗಳ ಮಧ್ಯೆ ಹೇಗಪ್ಪಾ ಹುಡುಕೋದು ಎಂದು ಒಂದು ಕ್ಷಣ ವಿಚಲಿತಳಾದೆ. ಪಟ್ಟು ಬಿಡದೆ ಎಲ್ಲವನ್ನೂ ತಡಕಾಡಿದೆ. ಕೊನೆಗೂ 'ನನ್ನ ಆಸೆ' (ಲಿಪ್‌ಸ್ಟಿಕ್) ಸಿಕ್ಕಿತು. ಅದನ್ನು ತೆಗೆದುಕೊಂಡು ಯಾರಿಗೂ ಸಿಗದ ಹಾಗೆ ಬಚ್ಚಿಟ್ಟೆ.

ಆದರಿವತ್ತು ಕಾಲ ಬದಲಾಗಿದೆ. ಇಂದು ತುಟಿ ರಂಗೇರಿಸಿಕೊಳ್ಳಲು ನನ್ನ ಬಳಿ ತರಹೇವಾರಿ ಬಣ್ಣದ ಲಿಪ್ಸ್ ಸ್ಟಿಕ್ ಗಳಿದ್ದರೂ ಕೂಡ, ಅಂದು ಇದ್ದ ಆ ಮೋಹ ಈಗ ಇಲ್ಲವಾಗಿದೆ. ಅವುಗಳು ನನ್ನನ್ನು ಅಣಕಿಸುತ್ತಿವೆಯೇನೋ ಎಂದು ಒಮ್ಮೊಮ್ಮೆ ಅನಿಸುವುದುಂಟು.

ಇಂದು ನನಗೆ ಬೆಳೆದ ಮಕ್ಕಳಿದ್ದಾರೆ. ನಾನು ಯಾವುದೇ ಬಟ್ಟೆ ತೊಟ್ಟರೂ, ಏನೇ ಮೇಕಪ್ ಮಾಡಿಕೊಂಡಿದ್ದರೂ ನನ್ನಪ್ಪ ಈಗೆಲ್ಲಾ ಸುಮ್ಮನೆ ಪಿಳಿಪಿಳಿ ನೋಡುತ್ತಾರೆ. ನಮ್ಮ ಫ್ಯಾಮಿಲಿ ಒಟ್ಟಾಗಿ ಸೇರಿದಾಗ ಇಂದಿಗೂ ನಮ್ಮ ಸವಿ ನೆನಪುಗಳನ್ನು ಮೆಲುಕು ಹಾಕುತ್ತಿರುತ್ತೇವೆ. ಆಗ ಈ ಲಿಪ್‌ಸ್ಟಿಕ್ ಪ್ರಸಂಗವನ್ನು ನೆನೆದು ಅವರು ಜೋರಾಗಿ ನಗುತ್ತಾರೆ.

ಅಂದು ಅಷ್ಟೊಂದು ಸ್ಟ್ರಿಕ್ಟ್ ಆಗಿದ್ದ ನನ್ನಪ್ಪ ಇವರೇನಾ ಎಂದು ನಾನು ಆಶ್ಚರ್ಯಪಡುವಷ್ಟು ಇಂದು ಬದಲಾಗಿದ್ದಾರೆ.

ಹೌದು, ಕಾಲಚಕ್ರ ಉರುಳುತ್ತಲೇ ಇದೆ. ಏನೇ ಆದ್ರೂ, ಅಪ್ಪ **I love you.** ■

**ನೀವೂ ಬರೆಯಿರಿ**

*ಸವಿ ಸವಿ ನೆನಪು.. ಇದೊಂದು ಹೊಸ ಅಂಕಣ.*

*ಬದುಕಿನಲ್ಲಿ ಸಾವಿರ ಸವಿನೆನಪುಗಳಿವೆ. ಅಂತಹ ನೆನಪುಗಳಲ್ಲಿ ಒಂದನ್ನು ಹೆಕ್ಕಿ ತೆಗೆದು ಅಕ್ಷರ ರೂಪಕ್ಕಿಳಿಸಿ. ಅದನ್ನು ಉತ್ತಮ ಚಿತ್ರ ಸಮೇತ ನಮಗೆ ಕಳುಹಿಸಿ. ಬರಹ ಸುಮಾರು 400 ಶಬ್ದಗಳಿರಲಿ. ನಿಮ್ಮ ಹೆಸರು, ವಿಳಾಸ, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಿರಿ.*